ಪಬ್ಲಿಕ್ ವರ್ಕ್ಸ್ ಇಲಾಖಾ.

ತಾರೀಖು 21ನೇ ಫಿಬ್ರವರೀ 1877.

ಶಿವಮೊಗ್ಗಾ ಡಿವೀಜ್ಞ ಎಗ್ಜಿಕ್ಯೂಟಿವ್ ಇಂಜನಿಯ್ಯರ್ ಆಫಿಸ್ ಮುನಷೀ ಕೃಷ್ಣರಾಯರಿಗೆ ಬಗರ್ ತಲಬ್ 1877ನೇ ಇಸವೀ ಜನವರೀ 9ನೇ ತಾರೀಖು ಲಗಾಯತು 2 ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

A. STODDARD,
Exec. Engr., Shimoga Division.

ತಾರೀಖು 26ನೇ ಫಿಬ್ರವರೀ 1877.

ಮೈಸೂರು ಡಿವೀಜ್ಞ ಎಗ್ಜಿಕ್ಯೂಟಿವ್ ಇಂಜನಿಯ್ಯರ್ ಆಫಿಸ್ ಆಕ್ಟಿಂಗ್ ಮುನಷಿ ಪಾಪುದೇವರಾಯರಿಗೆ 1877ನೇ ಫಿಬ್ರವರೀ 7ನೇ ತಾರೀಖು ಲಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

R. C. DOBBS, C. E.,
Exec. Engr., Ashtagram Division.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಸಲ್ಪಡುವದೇನಂದರೆ,— ಫಾರೆಸ್ಟ್ ಯಿಲಾಖೆಗೆ ಸೇರಿದ ಜಂಗ್ಲೀಗಳು (ಅಂದರೆ) ಬೆಂಗಳೂರು ಡಿಸ್ಟ್ರಿಕ್ಟ್ ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟ್ 1877—78,—1878—79,—1879—80, 1880—81, ಮತ್ತು 1881—82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರೆಲ್ 1ನೇ ಮುಕ್ತಂ ಲಗಾಯತ್ 1882ನೇ ಮಾರ್ಚೀ 31ರ ವರಿಗೆ ಡಿಸ್ಟ್ರಿಕ್ಟ್ ವಾರಾಗಿ ಜಡ್ ದರಖಾಸ್ತು ದಾರ್ರಿಗೆ ಜಾಸ್ತಿ ಮೊಲಕ 1877ನೇ ಮಾರ್ಚೀ 10ನೇ ಮುಕ್ತಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಜಡ್ ದರಖಾಸ್ತುದಾರನ, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರೆನ್ಸೀ ನೋಟ್‌ಗಳು ಯಾ ನಗದು ಹಣ ಆರು ಪಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸಮಾನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಪಿಸ್ತು ಸೂಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟ್ ಮೊಬಲಗ್ ಪೈಕೀ 60ರಲ್ಲಿ ಒಂದು ಹಿಸ್ಸೆಗೆ ಸಮಾನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟ್ ಕೂಡ್ಲೆ ಪುನಶ್ಚ ಹರಾಜ್ ಮಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.

3. ಮಂಜೂರಾದ ದರಖಾಸ್ತುದಾರನು ತನ್ನ ಕಂಟ್ರಾಕ್ಟಿನೊಳಗೆ 1877ನೇ ಏಪ್ರೆಲ್ 1ನೇ ಮುಕ್ತಂನಲ್ಲಿ ಪ್ರವೇಶಿಸಿ, ತನ್ನ ಮೊದಲನೇ ಮಾಹೇವಾರೀ ಪಿಸ್ತನ್ನು 1877ನೇ ಮೇ 15ನೇ ಮುಕ್ತಂ ಮಿನ್ನಲಗಲಿ ತಪ್ಪುರ್ವವಾಗಲಿ, ಪಾವತೀ ಮಾಡತಕ್ಕದ್ದು. ಆ ತರುವಾಯದ ಮಾಹೇವಾರೀ ಪಿಸ್ತುಗಳು ಪ್ರತಿ ತಿಂಗಳ 15ನೇ ಮುಕ್ತಂ ಮಿನ್ನಲಗಲಿ ತಪ್ಪುರ್ವವಾಗಲಿ, ಪಾವತೀ ಮಾಡತಕ್ಕದ್ದು. ಅಂತಾ ಮಾಹೇವಾರೀ ಪಿಸ್ತುಗಳು ಡಿಪಾಜಿಟ್ ಯಿಟ್ಟ ಮೊಬಲಗಿಗೆ ನಿಸ್ಪತ್ ಯಲ್ಲದೆ ಪ್ರತ್ಯೇಕವಾಗಿ ಪಾವತೀ ಮಾಡತಕ್ಕದ್ದು. ಸದರೀ ಡಿಪಾಜಿಟ್ ಮೊಬಲಗ್ ಕಂಟ್ರಾಕ್ಟ್ ಪೂರೈಸತಕ್ಕ ಕಾಲದ ಆಖೈರ್ 6 ಪಿಸ್ತುಗಳಲ್ಲಿ ಸಲಿಕೆಗೆ ತೆಗದುಕೊಳ್ಳಲ್ಪಡುವದು.

4. ಕಂಟ್ರಾಕ್ಟುದಾರನು ಕೊಡತಕ್ಕ ಮಾಹೇವಾರೀ ಪಿಸ್ತುಗಳ ಮೇಜಿ, ಲೋಕಲ್ ಸೆಸ್ಸು ವಿಧಿಸಲ್ಪಟ್ಟ ದರ ಪ್ರಕಾರ ಕಟ್ಟಲ್ಪಡುವದು.

5. ಕ್ರಮವಾಗಿ ಯಿರಡು ತಿಂಗಳಲ್ಲಿ ಸದರೀ ಪಿಸ್ತು ಕೊಡಲಿಕ್ಕೆ ತಪ್ಪಿದರೆ ಯಾ ಲಿಡ್ತೀ ಉಂಟಾದರೆ, ಸದರೀ ಕಂಟ್ರಾಕ್ಟು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿ ಹಾಗೆ ತಪ್ಪುವ ದರಖಾಸ್ತುದಾರನಿಗೆ ನಾಕ್ಸಾರ್ಕರವಾಗಿ ಡಿಪಾಜಿಟ್ ಮೊಬಲಗಿನ ನಿಮಿತ್ಯ ವಿಲ್ಲದೆಯೇ ಪುನಶ್ಚ ಹರಾಜ್ ಹಾಕಲ್ಪಡುವದು. ಸದರೀ ಡಿಪಾಜಿಟ್ ಮೊಬಲಗ್ ಗವರ್ನ್‌ಮೆಂಟಿಗೆ ಸೇರಿಸಿಕೊಳ್ಳಲ್ಪಡುವದು.

L. RICKETTS,
Offg. Dy. Commr.